## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 744/2023

**ಸಾಕ್ಷಿಯನ್ನು ದಿಃ 22.07.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಅರ್ಜಿಯ ಮೇಲಿನ ಆದೇಶದಂತೆ ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀ.T.M ವಕೀಲರಿಂದಃ**

ಆರೋಪಿ ನನಗೆ 10-15 ವರ್ಷಗಳಿಂದ ಪರಿಚಯ. ನಾನು ಎಸ್.ಎಸ್.ಎಲ್.ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ವ್ಯವಸಾಯ ಮಾಡುತ್ತೇನೆ. ವ್ಯವಸಾಯದಿಂದ ನನಗೆ ವಾರ್ಷಿಕ ರೂ. 10 ಲಕ್ಷ ಆದಾಯ ಬರುತ್ತದೆ. ನನ್ನ ಆದಾಯದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ. ಆರೋಪಿ 2022ರಲ್ಲಿ ಹಣ ಕೇಳಲು ನನ್ನ ಬಳಿ ಬಂದಿದ್ದರು. ನನ್ನ ಕುಟುಂಬದಲ್ಲಿ ನಾನು, ನನ್ನ ಪತ್ನಿ ಮತ್ತು ಮಕ್ಕಳು ವಾಸವಿದ್ದೇವೆ. ನನ್ನ ಕುಟುಂಬಕ್ಕೆ APL ರೇಷನ್ ಕಾರ್ಡ್ ಇದೆ. ನನ್ನ ಜಮೀನಿಗೆ ಸಂಬಂಧಿಸಿದ RTC ಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನನ್ನ ಮತ್ತು ಆರೋಪಿಯ ಮಧ್ಯೆ ಆಗಿದೆ ಎನ್ನುವ ವ್ಯವಹಾರವಾನ್ನು ನೋಡಿದವರು ಇಲ್ಲ. ಆರೋಪಿಯ ವಿರುದ್ಧ ಈ ಪ್ರಕರಣವನ್ನು ರೂ. 10 ಲಕ್ಷಕ್ಕೆ ದಾಖಲಿಸಿದ್ದೇನೆ. ಆರೋಪಿ ಹಣ ಕೇಳಲು ಬಂದಾಗ ಸಮಯ ಮಧ್ಯಾಹ್ನ ಆಗಿತ್ತು. ಆರೋಪಿ ಹಣ ಬೇಕು ಎಂದು ನೇರ ಮಾತಿನ ಮೂಲಕ ಕೇಳಿದರು. ಎಲ್ಲಿ ಹಣ ಕೊಟ್ಟಿದ್ದಿರಿ ಎಂದರೆ ಮರದ ವ್ಯಾಪಾರ ಮಾಡುತ್ತಿದ್ದ ಜಾಗದಲ್ಲಿ ಕೊಟ್ಟಿದ್ದೇನೆ. ನಾನು ನಗದಾಗಿ ಹಣ ಕೊಟ್ಟಿದ್ದೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳನ್ನು ತಿಳಿದುಕೊಂಡಿದ್ದೇನೆ. ಪ್ರಮಾಣ ಪತ್ರವನ್ನು ಇಂಗ್ಲಿಷ್‌ನಲ್ಲಿ ಬರೆದಿದ್ದು ತಿಳಿದುಕೊಂಡಿದ್ದಿರಾ ಎಂದರೆ ಕನ್ನಡದಲ್ಲಿ ತಿಳಿದುಕೊಂಡಿದ್ದೇನೆ.

(**ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು**, **ಕೋರಿಕೆ ಮೇರೆಗೆ ಮುಂದೂಡಲಾಯಿತು**.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.